India Foundation for the Arts
I F A

**ಇಂಡಿಯ ಫೌಂಡೇಷನ್ ಫಾರ್ ದಿ ಆರ್ಟ್ಸ್**

# ಕಲಾ ಸಂಶೋಧನೆ ಮತ್ತು ದಾಖಲಾತಿ

ನೀವು ಸಂಶೋಧಕರಾಗಿದ್ದರೆ ಅಥವಾ ಕಲಾವಿದರಾಗಿದ್ದು ನಿಮಗೆ

**(೧) ಕಲಾಭ್ಯಾಸ/ಕಲಾ ಪದ್ಧತಿಗಳ ನಿರ್ಮಾಣ ಮತ್ತು ಅವು 'ಪರಂಪರೆ'ಗಳೆಂದು ಮಾನ್ಯತೆ ಪಡೆಯುವ ಪ್ರಕ್ರಿಯೆಗಳು**

ಅಥವಾ

**(೨) ಸಮಕಾಲೀನ ಕಲೆಯಲ್ಲಿ ಕಲಾಭ್ಯಾಸ/ಕಲಾ ಪದ್ಧತಿಗಳು ಬದಲಾಗುವ ಬಗೆಯ ಕುರಿತ ಅಧ್ಯಯನದ** ಬಗ್ಗೆ ಆಸಕ್ತಿಯಿದ್ದರೆ ಈ ಪ್ರಕಟನೆಯನ್ನು ಗಮನಿಸಿ.

## ಅನುದಾನದ ವ್ಯಾಪ್ತಿ

ಈ ಅನುದಾನವು ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಕಲಾವಿದರಿಗೆ ಸಂಶೋಧನೆ ಮತ್ತು ದಾಖಲಾತಿ ಕಾರ್ಯ ಕೈಗೊಳ್ಳಲು ನೆರವು ನೀಡುತ್ತದೆ. ಈ ಕೆಳಗಿನ ವಿಷಯಗಳ ಅಡಿಯಲ್ಲಿ ನೆರವು ಲಭ್ಯವಿದೆ:

### ೧) ವರ್ತಮಾನದ ಕಲಾಭ್ಯಾಸ/ಪದ್ಧತಿಗಳಲ್ಲಿ ನಡೆದಿರುವ ಹೊಸ ಬೆಳವಣಿಗೆಗಳ ಬಗ್ಗೆ ಸಂಶೋಧನೆ ಮತ್ತು ದಾಖಲಾತಿ.

ಸಂಶೋಧಕರಾಗಿ ಅಥವಾ ಕಲಾವಿದರಾಗಿ ವರ್ತಮಾನ ಕಾಲದ ಕಲಾಭ್ಯಾಸ/ಪದ್ಧತಿಗಳಲ್ಲಿ ನಡೆದಿರುವ ಹೊಸ ಬೆಳವಣಿಗೆಗಳ ಬಗ್ಗೆ ಅಥವಾ ಬದಲಾವಣೆಗಳ ಬಗ್ಗೆ ಅಧ್ಯಯನ ನಡೆಸುವುದು ನಿಮ್ಮ ಉದ್ದೇಶವಿರಬಹುದು. ಉದಾಹರಣೆಗೆ, ದೂರದರ್ಶನ, ಅಂತರ್ಜಾಲ ಮುಂತಾದ ತಂತ್ರಜ್ಞಾನಗಳಿಗೂ ಇಂದಿನ ಕಲೆಗಳಿಗೂ ಇರುವ ಮುಖಾಮುಖಿಯ ಸಮೀಕ್ಷೆ; ಸ್ಥಳೀಯ ಸಮುದಾಯಗಳ ಮತ್ತು ಪ್ರಾಕೃತಿಕ ಪರಿಸರದ ಜೊತೆ ವ್ಯವಹರಿಸುವ ಕ್ಷೇತ್ರಬದ್ಧ ಕಾರ್ಯಗಳ ಅಧ್ಯಯನ; ಮತ್ತು ಕಲಾವಿದರ ಹಾಗೂ ಪ್ರೇಕ್ಷಕರ ನಡುವಿನ ಅಂತರವನ್ನು ತೊಡೆದುಹಾಕುವ ಜನಪರವಾದ ಕಲಾವ್ಯವಹಾರಗಳ ಅನ್ವೇಷಣೆ ಮುಂತಾದವು.

ಅಲ್ಲದೆ ನೀವು ಚಾಲ್ತಿಯಲ್ಲಿರುವ ಸಂಶೋಧನೆಯ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು, ಮತ್ತು/ಅಥವಾ ಇಂದಿನ ಅನ್ವೇಷಣಾವಿಧಾನಗಳಿಂದ ದೂರ ಸರಿದು ಹೊಸ ಸೈದ್ಧಾಂತಿಕ ಹಾಗೂ ತಾಂತ್ರಿಕ ಸಲಕರಣೆಗಳನ್ನು ಬಳಕೆಗೆ ತಂದುಕೊಂಡು ವರ್ತಮಾನದ ಕಲಾವ್ಯವಹಾರಗಳ ಅಧ್ಯಯನದ ಮೇಲೆ ಹೆಚ್ಚಿನ ಬೆಳಕು ಚೆಲ್ಲುವಂತ ಕೊಡುಗೆಗಳನ್ನು ನೀಡಲು ತತ್ಪರರಾಗಿರಬಹುದು.

ಇಂಥ ಅಧ್ಯಯನ/ಸಂಶೋಧನೆಗೆ ನಾವು ನೆರವು ನೀಡುತ್ತೇವೆ.

**೨) ಕಲಾಪರಂಪರೆಗಳ ನಿರ್ಮಾಣ ಅಥವಾ ಪುನರ್‌ರಚನೆಯನ್ನು ಕೂಲಂಕುಶವಾಗಿ ವಿಶ್ಲೇಷಿಸುವ ಸಂಶೋಧನೆ ಮತ್ತು ದಾಖಲಾತಿ**

'ಪರಂಪರೆ' ಎಂಬ ಪ್ರಯೋಗವನ್ನು ಇಂಗ್ಲೀಶ್‌ನಲ್ಲಿ 'ಟ್ರೆಡಿಶನ್' ಎನ್ನುತ್ತಾರೆ. *ಟ್ರೆಡೀಶನೇಮ್* ಎಂಬ ಲ್ಯಾಟಿನ್ ಭಾಷೆಯ ಪ್ರಯೋಗವು ಇದರ ಮೂಲವಾಗಿದ್ದು ಇದಕ್ಕೆ ಹಸ್ತಾಂತರ ಎಂಬ ಅರ್ಥವಿದೆ. ಅರಿವುಗಳು, ನಂಬಿಕೆಗಳು, ದಂತಕತೆಗಳು, ಆಚರಣೆಗಳು ಮುಂತಾದವು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹಸ್ತಾಂತರಗೊಳ್ಳುತ್ತವೆ. ಅಷ್ಟಲ್ಲದೆ ಪರಂಪರೆ ಎಂಬುದನ್ನು ಸಾಂಸ್ಕೃತಿಕ ನಂಬಿಕೆ ಮತ್ತು ಪದ್ಧತಿಗಳ ಚೌಕಟ್ಟಿನಲ್ಲಿ ದೀರ್ಘ ಕಾಲದಿಂದ ನೆಲೆಗೊಂಡ ಯೋಚನಾಕ್ರಮ ಅಥವಾ ಪದ್ಧತಿಯೆಂದು ಕೂಡ ಕಾಣಬಹುದು.

ಆದರೆ, ಅನೇಕ ಸಲ ಪರಂಪರೆಗಳು ಹಿಂದಿನ ತಲೆಮಾರಿನಿಂದ ಬಳುವಳಿಯಾಗಿ ಬಂದಿರುವುದಿಲ್ಲ. ಬದಲು ಅವು ಕಲ್ಪಿತವಾಗಿ ಅಥವಾ ಪುನರ್‌ರಚಿತವಾಗಿಯೇ ಆವಿಷ್ಕಾರ ಪಡೆದಿರುತ್ತವೆ. ಇದರ ಹಿಂದೆ ಆಯಾ ಕಾಲದ ಆಚರಣೆಗಳ, ನಂಬಿಕೆಗಳ, ಮೌಲ್ಯಗಳ ಮತ್ತು ನಡವಳಿಕೆಯ ರೀತಿಗಳ ಅನುಮೋದನೆಗೆ ಮತ್ತು ಮನ್ನಣೆಗೆ ಪ್ರಬಲವಾದ ಬುನಾದಿಯನ್ನು ಒದಗಿಸುವ ಉದ್ದೇಶವಿರಬಹುದು. ನಮಗೆ ಪರಂಪರೆಯಾಗಿ ಕಂಡುಬರುವ ಹಲವು ಆಚರಣೆಗಳು ಇತ್ತೀಚೆಗಷ್ಟೇ ಆವಿಷ್ಕಾರ ಪಡೆದಿದ್ದು ಅವುಗಳ ಹಿಂದೆ ಹತ್ತಾರು ಕಾರಣಗಳಿರುವ ಸಾಧ್ಯತೆಯಿದೆ. ಈ ಪೈಕಿ ನಮ್ಮ ವ್ಯವಹಾರಗಳನ್ನು, ಅಧಿಕಾರದ ಸಮತೋಲನಗಳನ್ನು ಅಥವಾ ಸಾಮಾಜಿಕ ಶ್ರೇಣೀಕರಣವನ್ನು ನ್ಯಾಯಸಮ್ಮತಗೊಳಿಸುವುದು ಒಂದಾದರೆ, ಒಕ್ಕೂಟಗಳ ನಡುವಿನ ಸಮನ್ವಯವನ್ನು ಪೋಷಿಸಿ ಸಾಮೂಹಿಕವಾದ ಅಸ್ಮಿತೆಗಳನ್ನು ಸುದೃಢಪಡಿಸುವುದು ಇನ್ನೊಂದು. ರಾಜಕೀಯ ಸಿದ್ಧಾಂತಗಳಿಗೆ, ಕಾರ್ಯಯೋಜನೆಗಳಿಗೆ ಮತ್ತು ಅಭಿರುಚಿಗಳಿಗೆ ಬೆಂಬಲ ನೀಡುವುದು ಮತ್ತೊಂದು. ಹೊಸ ಪ್ರೇಕ್ಷಕರನ್ನೂ ಹೊಸ ಮಾರುಕಟ್ಟೆಗಳನ್ನೂ ನಿರ್ಮಿಸುವ ಸಲುವಾಗಿ ಪ್ರಜ್ಞಾಪೂರ್ವಕವಾಗಿಯೇ ಕಲಾಪರಂಪರೆಗಳಿಗೆ ಹೊಸ ವ್ಯಾಖ್ಯೆಗಳನ್ನು ನೀಡಿ ಪುನರ್ಕಲ್ಪನೆಗೆ ಗುರಿಪಡಿಸಲಾಗುತ್ತದೆ.

ಈ ವಿಷಯದ ಅನ್ವಯ ಪರಂಪರೆಗಳ ನಿರ್ಮಾಣದ ಬಗ್ಗೆ ಅಧ್ಯಯನ ಕೈಗೊಳ್ಳಬಯಸುವ ಸಂಶೋಧಕರಿಗೆ ಮತ್ತು ಕಲಾವಿದರಿಗೆ ನೆರವು ನೀಡಲಾಗುವುದು. ಉದಾಹರಣೆಗೆ, ಪರಂಪರೆಯೊಂದನ್ನು ಪರಿಕಲ್ಪಿಸಿಕೊಳ್ಳುವಾಗ ಅಥವಾ ಪುನರ್‌ರಚಿಸುವಾಗ ಹುಟ್ಟಿಕೊಳ್ಳುವ ಹೊಸ ಅರ್ಥಗಳು, ಮೌಲ್ಯಗಳು ಮತ್ತು ಸಂಜ್ಞೆಗಳು ಯಾವುವು? ಆ ಪ್ರಕ್ರಿಯೆಯಲ್ಲಿ ಹೊರದೂಡಲ್ಪಡುವ, ಲುಪ್ತವಾಗುವ, ಅಗೋಚರವಾಗುವ ಅಥವಾ ಅಡಗಿಸಲ್ಪಡುವ ಅಂಶಗಳೇನು ಎಂಬುದನ್ನು ಶೋಧಿಸಲು ನೀವು ಆಸಕ್ತರಾಗಿರಬಹುದು. ಈ ಪ್ರಕ್ರಿಯೆಗಳು ಕಲಾವಿದರಿಗೂ, ಕಲಾ ಪ್ರಕಾರಕ್ಕೂ/ಅಭಿವ್ಯಕ್ತಿಗೂ ಅವುಗಳ ಉತ್ಪಾದನೆ ಮತ್ತು ಗ್ರಹಿಕೆಯ ಸಂದರ್ಭಗಳಿಗೂ ಇರುವ ಸಂಬಂಧವನ್ನು ಪರಿಶೀಲಿಸುವುದು ನಿಮ್ಮ ಉದ್ದೇಶವಾಗಿರಬಹುದು. ಅಥವಾ ಪರಂಪರೆಗಳ ನಿರ್ಮಾಣದಲ್ಲಿ ಕೆಲಸ ಮಾಡುವ ಪ್ರಭಾವಗಳ ಮತ್ತು ಸಿದ್ಧಾಂತಗಳ ಬಗ್ಗೆ ಅಧ್ಯಯನ ನಡೆಸುವುದು ನಿಮ್ಮ ಧ್ಯೇಯವಾಗಿರಬಹುದು. ಇಂಥ ಅಧ್ಯಯನ/ಸಂಶೋಧನೆಗೆ ನಾವು ನೆರವು ನೀಡುತ್ತೇವೆ.

**ಅರ್ಜಿ**

ಈ ಅನುದಾನ ಪದ್ಧತಿ ಕುರಿತು ನಿಮಗಿರುವ ಯಾವುದೇ ಪ್ರಶ್ನೆಗೆ ಉತ್ತರ ನೀಡಲು ಐಎಫ್ಎ ಸಿಬ್ಬಂದಿಗಳನ್ನು ಸಂಪರ್ಕಿಸಬಹುದು. April 30, 2014 ಅಥವಾ ಅದಕ್ಕೂ ಮೊದಲು ನೀವು ನಿಮ್ಮ ಕರಡು ಯೋಜನೆಗಳನ್ನು/ಪ್ರಸ್ತಾಪಗಳನ್ನು ಚರ್ಚಿಸಲು ನಮ್ಮನ್ನು ಸಂಪರ್ಕಿಸಬಹುದು ಅಥವಾ ಯೋಜನೆಯ ಕರಡು ಪ್ರತಿಯನ್ನು ಕಳಿಸಿ ನಮ್ಮ ಸಲಹೆಗಳನ್ನು ಪಡೆಯಬಹುದು.

ನಿಮ್ಮ ಅಂತಿಮ ಅರ್ಜಿಯು **ಅಂಚೆಯ ಮೂಲಕ** May 31, 2014 ರ ಒಳಗೆ ನಮಗೆ ತಲುಪತಕ್ಕದ್ದು. July 2014 ರ ಕೊನೆಯ ಹೊತ್ತಿಗೆ ಅನುದಾನಗಳ ಮಂಜೂರಾತಿ ಕುರಿತ ಮಾಹಿತಿ ಪ್ರಕಟವಾಗುವುದು.

ನಿಮ್ಮ ಪ್ರಸ್ತಾಪವನ್ನು ಇಂಗ್ಲೀಶ್ ಸೇರಿದಂತೆ ಯಾವುದೇ ಭಾರತೀಯ ಭಾಷೆಗಳಲ್ಲಿ ತಯಾರಿಸಬಹುದು.

ಯೋಜನೆಯು ಕನಿಷ್ಠ **ಹನ್ನೆರಡು ತಿಂಗಳು** ಹಾಗೂ ಗರಿಷ್ಟ **ಹದಿನೆಂಟು ತಿಂಗಳ** ಅವಧಿ ಹೊಂದಿರಬಹುದು.

ನಿಮ್ಮ ಬೇಡಿಕೆಯ ಮೇಲುಮಿತಿ **ರೂ. ೩ ಲಕ್ಷ**, ನೀವು ಚಲನಚಿತ್ರವನ್ನು ನಿರ್ಮಿಸುತ್ತಿದ್ದರೆ **ರೂ. ಐದು ಲಕ್ಷ**ದವರೆಗೆ ಕೋರಬಹುದು. ಯೋಜನೆಯ ಇಡಿಯ ಅವಧಿಯಲ್ಲಿ **ರೂ. ೧,೪೪,೦೦೦ ರವರೆಗೆ** ಗೌರವಧನವನ್ನು ನಿಮ್ಮ ಮುಂಗಡಪತ್ರದಲ್ಲಿ ಸೇರಿಸಬಹುದು. ಅನುದಾನದ ಒಟ್ಟೂ ಮೊತ್ತದಲ್ಲಿ ಈ ಗೌರವಧನವೂ ಸಹ ಸೇರಿದೆ.

ನಿಮ್ಮ ಅರ್ಜಿಯು ಈ ಕೆಳಗಿನ ವಿಷಯಗಳನ್ನು ಹೊಂದಿರತಕ್ಕದ್ದು:

೧) ನಿಮ್ಮ ಅಧ್ಯಯನ ಅಥವಾ ದಾಖಲಾತಿಗೆ ಸಂಬಂಧಿಸಿದ **ಕಲಾಪರಂಪರೆ(ಗಳ)** ಯಾ **ವರ್ತಮಾನದ ಕಲಾಭ್ಯಾಸ/ಪದ್ಧತಿಗಳ** ವಿವರ.
೨) ನಿಮ್ಮ ಯೋಜನೆಗೆ ಸಂಬಂಧಿಸಿದ ಮುಖ್ಯ **ಸಂಶೋಧನಾ ಪ್ರಶ್ನೆಗಳು.**
೩) ನೀವು ಅನುಸರಿಸಲಿರುವ ಸಂಶೋಧನಾ **ವಿಧಾನ** ಮತ್ತು/ಅಥವಾ ನಿಮ್ಮ ಅಧ್ಯಯನದ ವಿಷಯಕ್ಕೆ ಅಗತ್ಯವೆಂದು ನಿಮಗೆ ತೋರುವ ಹೊಸ ವಿಧಾನಗಳು.
೪) ಯೋಜನೆಯ **ಕಾಲಾವಧಿ,** ಮತ್ತು **ಕಾರ್ಯಸಂಯೋಜನೆ.**
೫) ಯೋಜನೆಯ ಪ್ರತಿಪಾದಿತ **ಫಲಿತಾಂಶಗಳು/ಪರಿಣಾಮಗಳು.**

ನಿಮ್ಮ ಪ್ರಸ್ತಾವನೆಯ ಜೊತೆ ಈ ಕೆಳಗಿನ ಸಂಗತಿಗಳನ್ನು ಲಗತ್ತಿಸತಕ್ಕದ್ದು:

೧) ನಿಮ್ಮ ಅಧ್ಯಯನಗಳ ಬಗ್ಗೆ ಬೆಳಕು ಚೆಲ್ಲತಕ್ಕ ಯಾವುದೇ **ಸಮರ್ಥನಾ ಸಾಮಗ್ರಿಗಳು.**
೨) ನಿಮ್ಮ **ಬಯೋ-ಡೇಟಾ.**
೩) ಅನುದಾನವು ಬಳಕೆಯಾಗುವ ರೀತಿಯ ಬಗ್ಗೆ **ವಿವರಣಾತ್ಮಕವಾದ ಮುಂಗಡಪತ್ರ**. ಯೋಜನೆಗೆ ಇತರ ಯಾವುದೇ ಮೂಲಗಳಿಂದ ನೆರವು ದೊರಕುವ ಸಾಧ್ಯತೆ ಇದ್ದಲ್ಲಿ ಅದಕ್ಕೆ ಸಂಬಂಧಿಸಿದ ವಿವರಗಳು.

೪) ನಿಮ್ಮ ವಿಳಾಸ, ದೂರವಾಣಿ/ಫ್ಯಾಕ್ಸ್ ಸಂಖ್ಯೆ, ಮತ್ತು ಈಮೇಲ್ ವಿಳಾಸ.
೫) ನೀವು ಯಾವುದೇ ಸಂಸ್ಥೆಯ ಪರವಾಗಿ ಅರ್ಜಿ ಸಲ್ಲಿಸುತ್ತಿದ್ದಲ್ಲಿ ಆ ಸಂಸ್ಥೆಯ ಹಿನ್ನೆಲೆ ಕುರಿತ ಮಾಹಿತಿಯನ್ನು ಒದಗಿಸುವುದಲ್ಲದೆ ಸಂಘದ ಟ್ರಸ್ಟ್ ಡೀಡ್‌ಗಳು, ವಾರ್ಷಿಕ ವರದಿ ಮತ್ತು ಕಳೆದ ಮೂರು ವರ್ಷಗಳ ಲೆಕ್ಕಪತ್ರಗಳ ಆಡಿಟ್ ವರದಿಯನ್ನೂ ನೀಡತಕ್ಕದ್ದು.

<u>**ಸಾಮಾನ್ಯ ಮಾಹಿತಿ**</u>

೧) ನಮ್ಮ ಅನುದಾನವು ಯೋಜನೆಗೆ ಸಂಬಂಧಿಸಿದ ವೈಯ್ಯಕ್ತಿಕ ಖರ್ಚುವೆಚ್ಚಗಳಿಗೆ, ಚಟುವಟಿಕೆಗಳಿಗೆ ಮತ್ತು ಪ್ರಯಾಣಕ್ಕಲ್ಲದೆ ಅಗತ್ಯವಿದ್ದಲ್ಲಿ ಉಪಕರಣಗಳ ಮತ್ತು ಸಾಮಗ್ರಿಗಳ ಕನಿಷ್ಟ ದರಗಳಿಗೆ ಮಾತ್ರ ನೆರವು ನೀಡುತ್ತದೆ. ಮುಂಗಡಪತ್ರದಲ್ಲಿ ಸೂಚಿಸಲಾಗುವ ಪ್ರತಿಯೊಂದು ಬೇಡಿಕೆಯೂ ಯೋಜನೆಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ಅಂಶಕ್ಕೆ ಅನ್ವಯಿಸುವ ವೆಚ್ಚವಾಗಿರಬೇಕು.
೨) ನಿಮ್ಮದು ವೈಯ್ಯಕ್ತಿಕ ಅರ್ಜಿಯಾಗಿದ್ದಲ್ಲಿ ಓರ್ವ ಅಕೌಂಟೆಂಟಿನ ಖರ್ಚನ್ನು ಮುಂಗಡಪತ್ರದಲ್ಲಿ ಅಳವಡಿಸಿಕೊಳ್ಳತಕ್ಕದ್ದು.
೩) ಸಂಸ್ಥೆಯ ನಿರ್ವಹಣೆ, ನಿರ್ಮಾಣದ ಖರ್ಚು ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದ ವೆಚ್ಚಗಳನ್ನು ಮುಂಗಡಪತ್ರದಲ್ಲಿ ಸೇರಿಸುವಂತಿಲ್ಲ.
**೪)** ನಿಮ್ಮ ಪ್ರಸ್ತಾಪದ ಪಠ್ಯವನ್ನು ನಿಮ್ಮ ಗುರುತು ಬಯಲುಪಡಿಸದಂತೆ ಸಿದ್ಧಪಡಿಸತಕ್ಕದ್ದು.
೫) ನಿಮ್ಮ ಕರಡು ಪ್ರಸ್ತಾಪವನ್ನು ಈಮೇಲ್ ಮೂಲಕ ಕಳುಹಿಸಬಹುದು. ಆದರೆ ನಿಮ್ಮ **ಅಂತಿಮ ಪ್ರಸ್ತಾಪ** ಮತ್ತು ಎಲ್ಲಾ ಸಮರ್ಥನಾ ಸಾಮಗ್ರಿಗಳನ್ನು **ಅಂಚೆ ಮೂಲಕವೇ ಕಳಿಸತಕ್ಕದ್ದು**. ಅಂತಿಮ ಪ್ರಸ್ತಾಪ ನಮಗೆ ತಲುಪಬೇಕಾದ **ಕೊನೆಯ ದಿನಾಂಕ** May 31, 2014 .
೬) ನಿಮ್ಮ ಪ್ರಸ್ತಾಪ ಮತ್ತು ಸಮರ್ಥನಾ ಸಾಮಗ್ರಿಗಳು ಕೊನೆಯ ದಿನಾಂಕದ ಮುನ್ನ ಐಎಫ್‌ಎಗೆ ತಲುಪಿಸುವುದು ನಿಮ್ಮ ಜವಾಬ್ದಾರಿಯಾಗಿದೆ. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
೭) ನಿಮ್ಮ ಪ್ರಸ್ತಾಪ ಪರಿಗಣನೆಗೆ ಬಂದಲ್ಲಿ ಅದರ ಮೌಲ್ಯಮಾಪನದ ವೇಳೆಯಲ್ಲಿ ಕಂಡುಬರುವ ಯಾವುದೇ ಪ್ರಶ್ನೆಗೆ ನೀವು ಉತ್ತರ ನೀಡಬೇಕಾದೀತು.
೮) ನಿಮ್ಮ ಪ್ರಸ್ತಾಪವನ್ನು ಬಾಹ್ಯ ಮೌಲ್ಯಮಾಪಕರ ನೆರವಿನಿಂದ ಪರಿಶೀಲಿಸಲಾಗುವುದು. ಅನುದಾನದ ಬಗ್ಗೆ ಐಎಫ್‌ಎ ಕೈಗೊಳ್ಳುವ ನಿರ್ಣಯವೇ ಕಡೆಯದಾಗಿರುತ್ತದೆ.

**ಅರ್ಹತೆ**

ಭಾರತೀಯ ನಾಗರೀಕರು, ನೊಂದಣಿಯಾಗಿರುವ ಲಾಭರಹಿತ ಸಂಸ್ಥೆಗಳು ಮತ್ತು ಭಾರತದಲ್ಲಿ ಕನಿಷ್ಟ ಕಳೆದ ಐದು ವರ್ಷಗಳಿಂದ ವಾಸಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿರುತ್ತಾರೆ.

ನಿಮ್ಮ ಅರ್ಜಿಗಳನ್ನು ಮತ್ತು ಎಲ್ಲ ಪತ್ರವ್ಯವಹಾರಗಳನ್ನು ಈ ವಿಳಾಸಕ್ಕೆ ಕಳಿಸತಕ್ಕದ್ದು:

Tanveer Ajsi,
Programme Executive
India Foundation for the Arts,
'Apurva', Ground floor, No 259,
4th Cross, Raj Mahal Vilas, 2nd Stage, 2nd Block,
Bengaluru 560 094.
Tel: 080 23414681/82
E-mail: tanveerajsi@indiafa.org

**ಇತರ ಭಾರತೀಯ ಭಾಷೆಗಳಲ್ಲಿ ಈ ಸುತ್ತೋಲೆಯ ಅನುವಾದ ಲಭ್ಯವಿದ್ದು ಅದಕ್ಕಾಗಿ ನಮ್ಮನ್ನು ಸಂಪರ್ಕಿಸಬಹುದು ಅಥವಾ ನಮ್ಮ ವೆಬ್‌ಸೈಟ್ www.indiaifa.org ನಿಂದ ಪಡೆದುಕೊಳ್ಳಬಹುದು**